ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗರಸ್ತೆ, ಬೆಂಗಳೂರು–1

ಸಂಖ್ಯೆ:ಸಿ7(8)/ಆರ್.ಟಿ.ಇ/ಶು.ಮ/ತಂತ್ರಾಂಶ/2019–20 ದಿನಾಂಕ: 09–10–2020

::ಸುತ್ತೋಲೆ::

ವಿಷಯ : 2019–20ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿಗೆ ಅಪೀಲ್ ಹೋಗ ಬಯಸುವ ಶಾಲೆಗಳಿಗೆ ಅಪೀಲು ತಂತ್ರಾಂಶ ಬಿಡುಗಡೆ ಮಾಡಿರುವ ಬಗ್ಗೆ.

ಉಲ್ಲೇಖ : ದಿನಾಂಕ :07–09–2020 ರಂದು ಮಾನ್ಯ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಇವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿ

***********

ಶಿಕ್ಷಣ ಹಕ್ಕು ಕಾಯಿದೆ ಸೆಕ್ಷನ್ 12(1)(ಸಿ) ಅಡಿ ಪ್ರವೇಶ ಪಡೆದ ವಿದ್ಯಾರ್ಥಿಗಳ 2019–20ನೇ ಸಾಲಿನ ಶುಲ್ಕ ಮರುಪಾವತಿಯ ಎರಡೂ ಕಂತುಗಳ ಮೊತ್ತವನ್ನು ಪಡೆದು, ಶಾಲಾ ಹಂತದಲ್ಲಿ ಕ್ಲೈಂ ಮಾಡಿರುವ ಮೊತ್ತವು ಕೆಲವು ಕಾರಣಗಳಿಂದ ಅಂದರೆ ಆರ್.ಟಿ.ಇ. ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ವ್ಯತ್ಯಯ, ಶಾಲಾ ಖರ್ಚು ವೆಚ್ಚಗಳು ಅಥವಾ ಇವರೆಡೂ ಸೇರಿ ವ್ಯತ್ಯಯವಾಗಿರುವಂತಹ ಬಾಧಿತ ಶಾಲೆಗಳಿಗೆ ಅಪೀಲ್ ಸಲ್ಲಿಸಿ ಅರ್ಹ ಮೊತ್ತ ಪಡೆಯಲು ಅಪೀಲು ತಂತ್ರಾಂಶವನ್ನು ದಿನಾಂಕ : 09–10–2020 ರಿಂದ 23–10–2020ರ ವರೆಗೆ ಬಿಡುಗಡೆ ಮಾಡಿದೆ. ಅಪೀಲು ತಂತ್ರಾಂಶದಲ್ಲಿ ಅನುಸರಿಸಬೇಕಾದ ಕ್ರಮಗಳು ಕೆಳಕಂಡಂತಿರುತ್ತದೆ.

1. ಅಪೀಲು ಹೋಗ ಬಯಸುವ ಶಾಲೆಗಳು 2019–20ರ ಎರಡೂ ಕಂತಿನ ಶುಲ್ಕ ಮರುಪಾವತಿ ಪಡೆದಿರಬೇಕು.
2. ಬಿಟ್ಟು ಹೋಗಿರುವ ಆರ್.ಟಿ.ಇ. ವಿದ್ಯಾರ್ಥಿಗಳ ಪಟ್ಟಿಯನ್ನು ಶುಲ್ಕ ಮರುಪಾವತಿ ತಂತ್ರಾಂಶದ ಶಾಲಾ ಲಾಗಿನ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಸದರಿ ಪಟ್ಟಿಯಲ್ಲಿನ ಅರ್ಹ ಮಕ್ಕಳನ್ನು ಎಸ್.ಎ.ಟಿ.ಎಸ್. ತಂತ್ರಾಂಶದಿಂದ ಸೆಳೆಯಲಾಗಿರುತ್ತದೆ. ಯಾವುದೇ ವಿದ್ಯಾರ್ಥಿಯನ್ನು ಅಪೀಲು ತಂತ್ರಾಂಶದಲ್ಲಿ ಸೆಳೆಯಬೇಕಾದಲ್ಲಿ ಆ ವಿದ್ಯಾರ್ಥಿಯ ಹಾಜರಾತಿ ಕಡ್ಡಾಯವಾಗಿದ್ದು, ತಂತ್ರಾಂಶದಲ್ಲಿ ಹಾಜರಾತಿ ವೀಕ್ಷಣೆ ಬಟನ್ ಒತ್ತಿದರೆ ಪ್ರಾಥಮಿಕ ತರಗತಿಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಎಸ್.ಎ.ಟಿ.ಎಸ್. ತಂತ್ರಾಂಶದಲ್ಲಿ ದಾಖಲಾದ ಹಾಜರಾತಿ ವಿವರಗಳು ಪ್ರದರ್ಶವಾಗುತ್ತದೆ. ಇದನ್ನಾಧರಿಸಿ ಸೇರ್ಪಡೆ ಮಾಡಲು ಅವಕಾಶವಿದೆ. ಪೂರ್ವ ಪ್ರಾಥಮಿಕ ತರಗತಿ ವಿದ್ಯಾರ್ಥಿಗಳ ಹಾಜರಾತಿಯನ್ನು ಶಾಲೆಯವರೇ ಖುದ್ದಾಗಿ ನಮೂದಿಸಿ ಸೇರ್ಪಡೆ ಮಾಡಬಹುದಾಗಿದೆ.
3. ಶಾಲಾ ಹಂತದಲ್ಲಿ ಇತರೆ ವೆಚ್ಚಗಳ ವಿವರಗಳನ್ನು ನಮೂದಿಸಲು ತಂತ್ರಾಂಶದ ಇತರೆ ವೆಚ್ಚಗಳ ಅಡಿಯಲ್ಲಿ 05 ಪ್ರತ್ಯೇಕ ಬಾಕ್ಸ್‌ಗಳನ್ನು ನೀಡಿದ್ದು, ಈ ಬಾಕ್ಸ್‌ಗಳಲ್ಲಿ ವೆಚ್ಚದ ವಿವರ ಮತ್ತು ಮೊತ್ತವನ್ನು ನಮೂದಿಸುವುದು.
4. ಶಾಲಾ ಹಂತದ ಅಪೀಲು ಲಾಗಿನ್‌ನಲ್ಲಿ ಸೇರಿಸಲಾಗಿರುವ ಪ್ರತಿ ವಿದ್ಯಾರ್ಥಿಗೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮತ್ತು ಉಪನಿರ್ದೇಶಕರ ಲಾಗಿನ್‌ಗಳಲ್ಲಿ ಚೆಕ್ ಬಾಕ್ಸ್ ನೀಡಲಾಗಿದ್ದು, ಸಂಬಂಧಿಸಿದ ಅಧಿಕಾರಿಗಳು ಸದರಿ ವಿದ್ಯಾರ್ಥಿಗಳ ವಿವರಗಳನ್ನು ಪರಿಶೀಲಿಸಿ, ಖಾತ್ರಿ ಪಡಿಸಿಕೊಂಡ ನಂತರವೇ ಅನುಮೋದನೆ ನೀಡುವುದು.
5. ಕ್ಷೇತ್ರ ಶಿಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಅಪೀಲ್ ಅರ್ಜಿಯನ್ನು ತಿರಸ್ಕರಿಸಿದಲ್ಲಿ (Disagree) ಕಾರಣವನ್ನು ಕಡ್ಡಾಯವಾಗಿ ದಾಖಲಿಸುವುದು.

6. ಅಪೀಲು ತಂತ್ರಾಂಶವು ಏಕಮುಖ ಹರಿವಿಗೆ ಒಳಪಟ್ಟಿದ್ದು, ಇದು ಮಾನ್ಯ ಆಯುಕ್ತರ ಹಂತದಲ್ಲಿ ತಿರಸ್ಕೃತವಾದಲ್ಲಿ ಸದರಿ ಶಾಲೆಯ ಪ್ರಸ್ತಾವನೆಯನ್ನು ಮತ್ತೊಮ್ಮೆ ಪರಿಗಣಿಸಲಾಗುವುದಿಲ್ಲ.
7. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು ತಮ್ಮ ಲಾಗಿನ್‌ಗಳಲ್ಲಿ ಬಾಕಿ ಉಳಿಸಕೊಂಡಿರುವ 2019–20ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿಯ ಪ್ರಥಮ ಮತ್ತು ದ್ವಿತೀಯ ಕಂತಿನ ಬೇಡಿಕೆ ಅರ್ಜಿಗಳನ್ನು ತುರ್ತಾಗಿ ಇತ್ಯರ್ಥಪಡಿಸಿ, ಅಪೀಲು ಹೋಗ ಬಯಸುವ ಶಾಲೆಗಳಿಗೆ ಅವಕಾಶ ನೀಡುವುದು.
8. 2019–20ರ ಆರ್.ಟಿ.ಇ. ಶುಲ್ಕ ಮರುಪಾವತಿ ಅಪೀಲು ತಂತ್ರಾಂಶದ ಬಳಕೆ ಕೈಪಿಡಿಯನ್ನು (User Manual) ಇಲಾಖಾ ವೆಬ್‌ಸೈಟ್‌ನಲ್ಲಿ Upload ಮಾಡಲಾಗಿದ್ದು, ಅದರಂತೆ ಕ್ರಮವಹಿಸುವುದು.
9. 2019–20ರ ಶುಲ್ಕ ಮರುಪಾವತಿಗೆ ಅಪೀಲನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅಂತಿಮ ದಿನಾಂಕ : 23–10–2020 ಆಗಿದ್ದು, ತದನಂತರ ಅಪೀಲ್ ಸಲ್ಲಿಸಲು ಯಾವುದೇ ಅವಕಾಶವಿರುವುದಿಲ್ಲ.

2019–20ರ ಆರ್.ಟಿ.ಇ. ಶುಲ್ಕ ಮರುಪಾವತಿ ಅಪೀಲಿನಲ್ಲಿ ಮೇಲಿನ ಎಲ್ಲಾ ಕ್ರಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಲು ಸೂಚಿಸಿದೆ.

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

**ಪ್ರತಿಗಳು :**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ವಲಯ/ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
3. ಹಿರಿಯ ಸಹಾಯಕ ನಿರ್ದೇಶಕರು/ ಇ ಆಡಳಿತ ವಿಭಾಗ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ
4. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಎಸ್.ಎ.ಟಿ.ಎಸ್. ವಿಭಾಗ, ಸಮಗ್ರ ಶಿಕ್ಷಣ ಅಭಿಯಾನ, ಇವರಿಗೆ ಕಳುಹಿಸುತ್ತಾ ಆರ್.ಟಿ.ಇ. ಅಡಿ. ದಾಖಲಾದ ವಿದ್ಯಾರ್ಥಿಗಳು ಶುಲ್ಕ ಮರುಪಾವತಿ ತಂತ್ರಾಂಶದಲ್ಲಿ ಇಲ್ಲದಿದ್ದಲ್ಲಿ ಅಥವಾ ಹಾಜರಾತಿಯು ಬಿಟ್ಟುಹೋಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ಇ–ಆಡಳಿತ ವಿಭಾಗಕ್ಕೆ ತುರ್ತಾಗಿ ಒದಗಿಸಲು ಅಗತ್ಯ ಕ್ರಮವಹಿಸುವುದು.
5. ಸಂಬಂಧಿಸಿದ ಶಾಲೆಗಳ ಕಾರ್ಯದರ್ಶಿಗಳು/ಮುಖ್ಯ ಶಿಕ್ಷಕರಿಗೆ ಆಯಾ ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಅಗತ್ಯ ಕ್ರಮಕ್ಕಾಗಿ
6. ಕಛೇರಿ ಪತ್ರಿ.